ಮುಡಿಗೆ ಅಲಂಕರಿಸುವ ಅಂಬಡ ಕೂಡಾ ವೈಶಿಷ್ಟ್ಯಪೂರ್ಣವಾಗಿದ್ದು, ಚಿನ್ನದ ಪಿನ್‌ಗೆ ಮುತ್ತುಗಳಿಂದ ಅಲಂಕರಿಸಿರುತ್ತಾರೆ. ಕೂದಲನ್ನು ಹಿಂದಕ್ಕೆ ಮುಡಿ ಹಾಕುವುದು ಅಲ್ಲಿಯ ಸಂಪ್ರದಾಯ. ಮುಡಿಯ ಮೇಲೆ ಈ ಅಂಬಡವನ್ನು ಸಿಕ್ಕಿಸುತ್ತಾರೆ.

ಕುಡ್ಯ ಅಥವಾ ಉತ್ತರಕನ್ನಡದಲ್ಲಿ ಕುಡುಕು ಎಂದೇ ಕರೆಯಲಾಗುವ ಕಿವಿಯೋಲೆ ಕೂಡಾ ಮುತ್ತಿನಿಂದ ತಯಾರಿಸುವ ಸಾಂಪ್ರದಾಯಕ ಆಭರಣ. ಉತ್ತಮ ದರ್ಜೆಯ ಏಳು ಮುತ್ತುಗಳನ್ನು ಹೂವಿನಾಕಾರದಲ್ಲಿ ಚಿನ್ನದ ಸರಿಗೆಯ ಮೂಲಕ ಬಂಧಿಸಿ ಮಾಡುವ ಈ ಮೋಹಕ ಒಡವೆಗೆ ಮಧ್ಯೆ ಮುತ್ತಿನ ಬದಲು ಕೆಂಪು ಹರಳು ಅಥವಾ ಮಾಣಿಕ್ಯ, ಪಚ್ಚೆಯನ್ನು ಅಳವಡಿಸುವ ಪದ್ಧತಿಯೂ ಇದೆ. ಪ್ರಸಕ್ತ ಫ್ಯಾಷನ್ ಟ್ರೆಂಡ್ ಆಗಿರುವ ಇಯರ್ ಕ್ಲಿಪ್ ರೀತಿಯ ಕರ್ಣಾಭರಣ ಮೋತಿ ಕಾನ್ ಕೂಡಾ ಅಲ್ಲಿ ಜನಪ್ರಿಯ.

ಮೂಗು, ಕಿವಿ, ತಲೆ ಮುಗಿದ ನಂತರ ಕತ್ತಿನ ಸರದಿ. ವೈವಿಧ್ಯಮಯ ನೆಕ್ಲೇಸ್‌ಗಳು, ಉದ್ದನೆಯ ಸರಗಳು ಮಹಾರಾಷ್ಟ್ರದ ಆಭರಣಗಳಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಥುಶಿ ಎಂಬುದು ಕತ್ತಿನ ಸುತ್ತ ಬಿಗಿಯಾಗಿ ಕೂರುವ ಚೋಕರ್ ಆಭರಣ. ಚಿಕ್ಕ ಚಿಕ್ಕ ಚಿನ್ನದ ಮಣಿಗಳನ್ನು 3–4 ಸಾಲಿನಲ್ಲಿ ದಪ್ಪನೆಯ ದಾರದಿಂದ ಬಂಧಿಸಿ ಮಾಡುವ ಈ ಆಭರಣದಲ್ಲಿ ಮಧ್ಯೆ ಅಲಂಕಾರಕ್ಕೆಂದು ಬಣ್ಣದ ಹರಳನ್ನು ಕೂರಿಸುವುದುಂಟು. ಇನ್ನೊಂದು ಕತ್ತಿನ ಆಭರಣವೆಂದರೆ ತನ್ಮಣಿ. ಮೂರು ಎಳೆಯ ಗೋಧಿ ಬಣ್ಣದ ಮುತ್ತಿನ ಸರಕ್ಕೆ ಹರಳಿನ ಪದಕ ಜೋಡಿಸಿ ಹಿಂದೆ ರೇಷ್ಮೆಯ ದಾರ ಸೇರಿಸುತ್ತಾರೆ.

ಅಂದವಾದ ಕತ್ತಿಗೆ ಶೋಭೆ ನೀಡುವ ಇನ್ನೊಂದು ಬಗೆಯ ನೆಕ್ಲೇಸ್ ವಜ್ರಾಟಿಕ ಅಥವಾ ಉತ್ತರಕನ್ನಡ ಜಿಲ್ಲೆಯಲ್ಲಿ ಗೆಜ್ಜೆಟಿಕ್ಕಿ ಎಂದು ಕರೆಯುವ ಒಡವೆ. ಜೋಳದ ಕಾಳಿನ ಮಾದರಿಯಲ್ಲಿ ಚಿನ್ನದ ಗುಂಡುಗಳನ್ನು ನಕ್ಷಿ ಕುಸುರಿ ಕೆತ್ತನೆಯ ಪಟ್ಟಿಯ ಕೊನೆಯಲ್ಲಿ ಕೂರಿಸಿ ರೇಷ್ಮೆ ಬಟ್ಟೆಯ ಮೇಲೆ ಹೊಲಿಯುತ್ತಾರೆ. ಕತ್ತಿಗೆ ಹೊಂದಾಣಿಕೆ ಮಾಡಲು ರೇಷ್ಮೆ ದಾರವನ್ನು ಸೇರಿಸುತ್ತಾರೆ. ಉದ್ದನೆಯ ಕಾಸಿನ ಸರದ ಜೊತೆ ಇದನ್ನು ಧರಿಸಿದರೆ ಎಲ್ಲರ ಮಧ್ಯೆ ಎದ್ದು ಕಾಣುತ್ತದೆ.





ವಜ್ರಾಟಿಕಾದಂತೆ ಕತ್ತಿನ ಸುತ್ತ ಕೂರುವ ಹಾರ ಸೂರ್ಯ ಹಾರ. ಸೂರ್ಯನ ಕಿರಣದಂತೆ ಉದ್ದನೆಯ ತ್ರಿಕೋನಾಕಾರದ ಬಿಲ್ಲೆಗಳನ್ನು ಪೋಣಿಸಿ ಮಾಡುವ ಈ ಹಾರಕ್ಕೆ ಕೆಂಪು, ಹಸಿರು ರಂಗಿನ ಹರಳುಗಳನ್ನು ಬೆಸೆಯಲಾಗುತ್ತದೆ. ಹಾಗೆಯೇ ಚಂಪಾಕಲಿ, ರಾಣಿಹಾರ, ಚಿಂಚ್‌ಪೇಠಿ, ಬಿಲ್ವಪತ್ರೆಯ ವಿನ್ಯಾಸದ ಬೆಲ್‌ಪಾಣ್ ಮೊದಲಾದ ಹಾರಗಳು ಈಗಲೂ ಹೆಂಗಳೆಯರ ಮನ ಸೆಳೆಯುತ್ತವೆ.

ಉದ್ದನೆಯ ಸಾಂಪ್ರದಾಯಕ ಹಾರಗಳಲ್ಲಿ ಬೋರ್‌ಮಾಲಾ, ಮೋಹನ ಮಾಲಾ ಪ್ರಮುಖವಾದವು. ಬೋರ್‌ಮಾಲಾದಲ್ಲಿ ಸ್ವಲ್ಪ ಉದ್ದನೆ ಆಕಾರದ, ಒಳಗೆ ಅರಗು ತುಂಬಿಸಿದ ಚಿನ್ನದ ಮಣಿಗಳನ್ನು ಕೆಂಪು ದಾರದಲ್ಲಿ ಪೋಣಿಸಲಾಗುವುದು. ಒಂದು, ಎರಡು ಎಳೆಗಳ ಬೋರ್‌ಮಾಲಾ ಜನಪ್ರಿಯ. ಹಾಗೆಯೇ ಜೋಳದ ಕಾಳುಗಳಂತೆ ಕೆತ್ತನೆ ಮಾಡಿದ ಬಂಗಾರದ ಗುಂಡುಗಳನ್ನು ಚಿನ್ನದ ಸರಿಗೆಯಲ್ಲಿ ಪೋಣಿಸಿದ ಮೋಹನ ಮಾಲೆಯೂ ಉದ್ದನೆಯ ಹಾರ. ಇದನ್ನು 4–5 ಎಳೆಗಳವರೆಗೂ ಸೇರಿಸಿ ಮಾಡಲಾಗುವುದು. ಲಕ್ಷ್ಮಿಯ ಕೆತ್ತನೆ ಇರುವ ಚಿನ್ನದ ಕಾಸುಗಳನ್ನು ರೇಷ್ಮೆ ದಾರದಲ್ಲಿ ಸೇರಿಸಿ ಮಾಡಿದ ಪುತ್ಲಿ ಅಥವಾ ಕಾಸಿನ ಸರವೂ ಮಹಾರಾಷ್ಟ್ರದಲ್ಲಿ 17ನೇ ಶತಮಾನದಿಂದಲೇ ಜನಪ್ರಿಯ.

ಮದುವೆಯಾದ ಹೆಣ್ಣುಮಕ್ಕಳು ಮಂಗಲಸೂತ್ರದಂತೆ ಧರಿಸುವ ಕೊಲ್ಹಾಪುರ ಸಾಜ್ ಬೆಳಗಾವಿಯಲ್ಲೂ ಜನಪ್ರಿಯ. ಉದ್ದನೆಯ ಹಾರದಲ್ಲಿ 21 ಎಲೆಗಳಂತಹ ಪದಕಗಳನ್ನು ಪೋಣಿಸಲಾಗುವುದು. 10 ಪದಕಗಳು ವಿಷ್ಣುವಿನ ದಶಾವತಾರದ ಪ್ರತೀಕವಾದರೆ, 8 ಪದಕಗಳು ಅಷ್ಟಮಂಗಲವನ್ನು ಪ್ರತಿನಿಧಿಸುತ್ತವೆ. ಎರಡು ಪದಕಗಳಲ್ಲಿ ಮಾಣಿಕ್ಯ ಹಾಗೂ ಪಚ್ಚೆಯಿದ್ದರೆ ಇನ್ನೊಂದು ಯಂತ್ರಮಣಿಯಾಗಿರುತ್ತದೆ. ಇವೆಲ್ಲವುಗಳನ್ನು ತುದಿಯಲ್ಲಿ ಸಪೂರ ಚಿನ್ನದ ತಂತಿಯಿಂದ ಬಂಧಿಸುವುದು ವಿಶೇಷ.

ಕತ್ತು ಜಗ್ಗುವಷ್ಟು ಆಭರಣ ಧರಿಸಿದರೆ ಸಾಕೇ! ಕೈ ಏನು ತಪ್ಪು ಮಾಡಿದೆ? ಮರಾಠರಲ್ಲಿ ಕೈಗಳಿಗೆ ಇಂತಿಂತ ಬಳೆಗಳನ್ನೇ ತೊಡಬೇಕು ಎಂಬ ಸಂಪ್ರದಾಯ ನಡೆದುಕೊಂಡು ಬಂದಿದೆ. ತೋಡೆ ಅಥವಾ ತ್ವಾಡೆ ಅವರಲ್ಲಿ ಜನಪ್ರಿಯ. ಅತ್ಯಂತ ಭಾರವಿರುವ ಈ ಕುಸುರಿ ಕೆತ್ತನೆಯ ಬಳೆಗಳನ್ನು ಮಾಡಲು ತಿಂಗಳುಗಟ್ಟಲೆ ತೆಗೆದುಕೊಳ್ಳುತ್ತಾರೆ ಕುಶಲಕರ್ಮಿಗಳು. ಯಾವುದೇ ಬೆಸುಗೆಯಿಲ್ಲದೇ 4–5 ತೊಲೆಯಷ್ಟಿರುವ ಈ ಬಳೆಗಳ ಮೇಲೆ ಜಾಲಂಧ್ರದ ರೀತಿಯ ಕೆತ್ತನೆ ಮೂಡಿಸಲಾಗುತ್ತದೆ. ಒಂದೊಂದು ಮಣಿಕಟ್ಟಿಗೆ ಒಂದೊಂದು ದಪ್ಪನೆಯ ತೋಡೆಯ ಜೊತೆಗೆ ತಲಾ ಒಂದು ಪಾಟಲಿ, ಎರಡೆರಡು ತೆಳ್ಳನೆಯ ಪಿಚೋಡಿ (ಬಿಲ್ವಾರ) ಧರಿಸುವುದು ಸಂಪ್ರದಾಯ. ಈ ಬಿಲ್ವಾರದ ಮೇಲೆ ಧಾರ್ಮಿಕ ಚಿಹ್ನೆಗಳು ಅಥವಾ ಹೂವಿನ ವಿನ್ಯಾಸ ಕೆತ್ತುವುದು ರೂಢಿ. ಚಿನ್ನದ ಬಳೆಗಳ ಮಧ್ಯೆ ಬೆಸ ಸಂಖ್ಯೆಯಲ್ಲಿ ಹಸಿರು ಗಾಜಿನ ಬಳೆಗಳ ಸಿಂಗಾರ.

ಕೈಗಳಿಗೆ ಭಾರವೆನಿಸುವಷ್ಟು ಬಳೆಗಳ ಜೊತೆ ತೋಳಿಗೆ ಬಾಜುಬಂಧ್ ಚೆಂದವಾಗಿ ಕೂರುತ್ತದೆ. ಗಟ್ಟಿ ಚಿನ್ನದಲ್ಲಿ ದಪ್ಪನೆಯ ಚಿನ್ನದ ತಂತಿಯನ್ನು ಸುತ್ತಿ ಮಾಡುವ ಈ ಒಡವೆಗೂ ಎಲ್ಲಿಯೂ ಬೆಸುಗೆ ಇರುವುದಿಲ್ಲ. ಮಧ್ಯೆ ಬಣ್ಣದ ಹರಳು, ಮುತ್ತುಗಳನ್ನು ಕೂರಿಸಲು ಮಾತ್ರ ಬೆಸುಗೆಯನ್ನು ಬಳಸಲಾಗುವುದು.

ಬೇರೆ ಕಡೆ ಸೊಂಟಕ್ಕೆ ಒಡ್ಯಾಣವಿದ್ದಂತೆ, ಮರಾಠರಲ್ಲಿಯೂ ಇದನ್ನು ತೊಡುವ ಸಂಪ್ರದಾಯವಿದೆ. ಆದರೆ ಇದರ ಜೊತೆಗೆ ಸೊಂಟದ ಬಳಿ ಸೀರೆಗೆ ಸಿಕ್ಕಿಸಿಕೊಳ್ಳುವ ಚಲ್ಲ ಅಲ್ಲಿ ಜನಪ್ರಿಯ. ಬೆಳ್ಳಿಯ ಚಲ್ಲ ಸಾಮಾನ್ಯರ ಕೈಗೆ ಎಟುಕುವಂಥದ್ದು. ಉಳ್ಳವರು ಚಿನ್ನದಲ್ಲಿ ನವಿಲು, ಹೂವಿನ ವಿನ್ಯಾಸ ಮಾಡಿದ ಚಲ್ಲ ಧರಿಸಿ ಮೆರೆಯುತ್ತಾರೆ.

ಈ ಆಭರಣಗಳು ಆನ್‌ಲೈನ್‌ನಲ್ಲೂ ಲಭ್ಯ. ಪಿ.ಎನ್.ಗಾಡ್ಗೀಳ್ ಅ್ಯಂಡ್ ಸನ್ಸ್, ಕೊಠಾರಿ ಮೊದಲಾದ ಆನ್‌ಲೈನ್ ಮಾರುಕಟ್ಟೆಗಳಿವೆ. ಅಪ್ಪಟ ಚಿನ್ನದ ಒಡವೆಗಳು ದುಬಾರಿ ಎನಿಸಿದರೆ ಅಮೆಝಾನ್, ಮಿರಾವ್, ಕ್ರಾಫ್ಟ್‌ವಿಲ್ಲಾ ಮೊದಲಾದ ಆನ್‌ಲೈನ್ ಬಝಾರ್‌ನಲ್ಲಿ ಇಂಥದ್ದೇ ವಿನ್ಯಾಸದ ಕೃತಕ ಒಡವೆಗಳನ್ನು ಖರೀದಿಸಿ ಖುಷಿಪಡಬಹುದು. ■